ದೂರಶಿಕ್ಷಣ ನಿರ್ದೇಶನಾಲಯ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ,

ದೂರವಾಣಿ ೦೮೩೯೪-೨೧೦೨೦೦, ಫ್ಯಾಕ್ಸ್ ೦೮೩೯೪-೨೪೧೩೩೫

ಇ-ಮೇಲ್ : dde.kuh@gmail.com, ವೆಬ್‌ಸೈಟ್: www.kannadauniversity.org

**ನಿರ್ದೇಶಕರು**

ಸಂಖ್ಯೆ:ಕವಿಹಂ:ದೂಶಿನಿ:ಸಂತ::೧೭-೧೮:೨೦೧೮-೧೯ ದಿನಾಂಕ ೩೦.೦೫.೨೦೧೮

ವಿಷಯ : ೨೦೧೭-೧೮ನೇ ಶೈಕ್ಷಣಿಕ ಸಾಲಿನ ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಡಿಪ್ಲೊಮ ಸಂಪರ್ಕ ಕಾರ್ಯಕ್ರಮ ಕುರಿತು.

ಉಲ್ಲೇಖ : ೧. ಸೂಚನಾ ಪತ್ರ ಸಂ: ಕವಿಹಂ:ದೂಶಿನಿ:ಸಂತ:೨೦೧೮-೧೯ ದಿನಾಂಕ ೧೨.೦೫.೨೦೧೮
೨. ಪರೀಕ್ಷಾ ವೇಳಾಪಟ್ಟಿ ಅಧಿಸೂಚನೆ ಸಂ: ಕವಿಹಂ:ಕುಸ:ದೂಶಿನಿ::ಪ.ವೇ:ಅ:೨೦೧೭-೧೮ ದಿನಾಂಕ ೨೩.೦೪.೨೦೧೮

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ೨೦೧೭-೧೮ನೇ ಶೈಕ್ಷಣಿಕ ಸಾಲಿನ ಎಂ.ಎ. **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ಡಿಪ್ಲೊಮ** ಕಾರ್ಯಕ್ರಮದ ಸಂಪರ್ಕ ತರಗತಿಗಳು ದಿನಾಂಕ **೧೮.೦೬.೨೦೧೮** ರಿಂದ **೨೭.೦೬.೨೦೧೮ರ** ವರೆಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಪಾಲ್ಗೊಂಡು ಇದರ ಪ್ರಯೋಜನೆ ಪಡೆಯಲು ಸೂಚಿಸಿದೆ.

* ೨೦೧೭-೧೮ನೇ ಸಾಲಿನಲ್ಲಿ ನೋಂದಣಿ ಪಡೆದ **ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ಡಿಪ್ಲೊಮ** ವಿದ್ಯಾರ್ಥಿಗಳ ಗುರುತಿನ ಚೀಟಿ(Identity card)ಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳಿಸಲಾಗಿದೆ.

* ಗುರುತಿನ ಚೀಟಿಯಲ್ಲಿ ತಮ್ಮ ಹೆಸರು ತಿದ್ದುಪಡಿ ಇದ್ದಲ್ಲಿ ಕೂಡಲೇ ದೂರಶಿಕ್ಷಣ ನಿರ್ದೇಶನಾಲಯ ಕಛೇರಿಗೆ ಬಂದು ಸರಿಪಡಿಸಿಕೊಳ್ಳುವುದು.

* ಶುಲ್ಕ ಪಾವತಿಸದೇ ಇರುವವರು ಪರೀಕ್ಷಾ ಶುಲ್ಕ ಸೇರಿದಂತೆ ಪೂರ್ಣ ಶುಲ್ಕವನ್ನು **ಜೂನ್ ೩೦, ೨೦೧೮ರ** ಒಳಗೆ ಪಾವತಿಸಬೇಕು. ಶುಲ್ಕದ ರಸೀದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು ತಪ್ಪದೇ ಸಲ್ಲಿಸುವುದು.

* ಸಂಯೋಜಕರು ಸಂಪರ್ಕ ತರಗತಿಯಲ್ಲಿ ಸೂಚಿಸಿದ ಪ್ರಾಯೋಗಿಕ ಪತ್ರಿಕೆಗೆ ಸಂಬಂಧಿಸಿದ ಸಂಪ್ರಬಂಧಗಳನ್ನು ಖಡ್ಡಾಯವಾಗಿ ಸಲ್ಲಿಸಿ ಸಹಿ ಮಾಡುವುದು.

* ಉಲ್ಲೇಖಿತ ಸೂಚನಾ ಪತ್ರದಲ್ಲಿ ಸೂಚಿಸಿದಂತೆ ಹತ್ತು ದಿನಗಳ ಸಂಪರ್ಕ ತರಗತಿಯಲ್ಲಿ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಗಳು ಸಂಪರ್ಕ ತರಗತಿಗೆ ಹಾಜರಾದ ಬಗ್ಗೆ ಹಾಜರಾತಿ ಸಹಿ ಮಾಡುವುದು. ಸಹಿ ಮಾಡಿಲ್ಲವಾದರೆ ಗೈರು ಹಾಜರಿಯೆಂದು ಪರಿಗಣಿಸಲಾಗುತ್ತದೆ.

* ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ವಿಶ್ವವಿದ್ಯಾಲಯವು ಯಾವುದೇ ವ್ಯವಸ್ಥೆಯನ್ನು ಕಲ್ಪಿಸುವುದಿಲ್ಲ. ತಮ್ಮ ವಾಸ್ತವ್ಯವನ್ನು ತಾವೇ ಮಾಡಿಕೊಳ್ಳತಕ್ಕದ್ದು.

* ಹೊಸಪೇಟೆ ಬಸ್ಸ್ ನಿಲ್ದಾಣದಿಂದ ವಿದ್ಯಾರಣ್ಯಕ್ಕೆ ಬಂದು ಹೋಗಲು ಕ.ರಾ.ಸಾ.ಸಂಸ್ಥೆಯ ಬಸ್ಸಿನ ಸೌಕರ್ಯ ಇರುತ್ತದೆ.

* ವಿಶ್ವವಿದ್ಯಾಲಯಕ್ಕೆ ಬರುವಾಗ ಗುರುತಿನ ಚೀಟಿಯನ್ನು ತರುವುದು ಕಡ್ಡಾಯ.

20/5/18

**ನಿರ್ದೇಶಕರು**
**ದೂರಶಿಕ್ಷಣ ನಿರ್ದೇಶನಾಲಯ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

ಇವರಿಗೆ,

**ಸಂಬಂಧಿಸಿದ ವಿದ್ಯಾರ್ಥಿಗಳಿಗೆ**

**ಪ್ರತಿಗಳು**

೧. ಮಾನ್ಯ ಕುಲಪತಿಗಳ ಆಪ್ತಶಾಖೆ, ಕವಿಹಂ
೨. ಮಾನ್ಯ ಕುಲಸಚಿವರ ಆಪ್ತಶಾಖೆ, ಕವಿಹಂ
೩. ಮಾನ್ಯ ಹಣಕಾಸು ಅಧಿಕಾರಿಗಳು, ಕವಿಹಂ
೪. ಉಪಕುಲಸಚಿವರು(ಆಡಳಿತ), ಕವಿಹಂ
೫. ಉಪ ಕುಲಸಚಿವರು(ಶೈಕ್ಷಣಿಕ), ಕವಿಹಂ
೬. ಸಹಾಯಕ ನಿರ್ದೇಶಕರು, ಮಾಹಿತಿ ಕೇಂದ್ರ
೭. ಸಹಾಯಕ ನಿರ್ದೇಶಕರು, ಗಣಕ ಕೇಂದ್ರ (ವಿ.ವಿ. ವೆಬ್‌ಸೈಟ್‌ಗೆ ಹಾಕುವುದು)
೮. ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳು
೯. ದೂರಶಿಕ್ಷಣ ನಿರ್ದೇಶನಾಲಯದ ಅಧ್ಯಯನ ಕೇಂದ್ರಗಳು
೧೦. ಕಚೇರಿ ಪ್ರತಿ